# ಶ್ರೀಮಾತೆಯವರ ಪತ್ರಗಳು - ೨೧

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**

### ಪತ್ರ - ೧೨೩

ಶ್ರೀ ಶ್ರೀ ಹರಿ

೧೫.೮.೧೯೧೫

ಶ್ರಾವಣ ೩೨, ಜಯರಾಂಬಾಟಿ

ಪರಮ ಆಶೀರ್ವಾದವನ್ನು ನೀಡಿ,

ನಿನ್ನ ಪತ್ರವು ಸಿಕ್ಕಿದೆ. ಅವನದು ಹೋಗುವ ಇಚ್ಛೆ ಸರಿಯಾಗಿದೆ, ಆದರ ಬಗ್ಗೆ ಹೇಳಿದಾಗ ಏನೂ ಮಾತನಾಡಿಲ್ಲ. ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು. ಇಲ್ಲಿ ಎಲ್ಲವೂ ಕ್ಷೇಮ. ನಿಮ್ಮೆಲ್ಲರ ಕುಶಲದ ಬಗ್ಗೆ ಕೇಳಿ ಸಮಾಧಾನವಾಯಿತು.

ಇತಿ ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Swami Santananda*

*Ramakrishna Advaita Ashrama*

*Luxa , Benares*

### ಪತ್ರ - ೧೨೪

ಶ್ರೀ ಹರಿಯ ಕೃಪೆ

೨೮ ಸೆಪ್ಟೆಂಬರ್, ೧೯೧೫

ಆಶ್ವಯುಜ ೮

ಪರಮ ಆಶೀರ್ವಾದಗಳು.

ತಾಯಿ, ನಿನ್ನ ಪತ್ರವು ಸಿಕ್ಕಿದೆ. ಇಲ್ಲಿ ಎಲ್ಲವೂ ಕ್ಷೇಮ. ನಿಮಗೆಲ್ಲರಿಗೂ ನನ್ನ ಆಶೀರ್ವಾದ. ಠಾಕೂರರನ್ನೇ ಪ್ರಾರ್ಥಿಸಬೇಕು. ಅವರೇ ಎಲ್ಲವನ್ನೂ ನಡೆಸುವರು. ಇತಿ.

ನಿಮ್ಮೆಲ್ಲರ ತಾಯಿ

ಕಲ್ಕತ್ತಕ್ಕೆ ಹೋಗುವುದು ಇನ್ನೂ ನಿರ್ಧಾರವಾಗಿಲ್ಲ.

***ಪತ್ರ ಪಡೆದವರ ಹೆಸರು.***

*ನಿರುಪಮಾ ದೇವಿ*

### ಪತ್ರ - ೧೨೫

ಶ್ರೀಶ್ರೀ ದುರ್ಗಮಾತೆ

೨೮.೯.೧೯೧೫

ಆಶ್ವಯುಜ ೧೧, ಜಯರಾಂಬಾಟಿ

ಚಿರಂಜೀವಿಗೆ,

ವಿಶೇಷವೇನೆಂದರೆ ತಾಯಿ ಸರಯೂ , ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ನನ್ನ ತಾಯಿ, ನಿಮ್ಮೆಲ್ಲರ ಜ್ಞಾಪಕ (ನನಗೆ) ಇದೆ. ತಾಯಿ ಮಕ್ಕಳನ್ನು ಯಾವತ್ತೂ ಮರೆಯಲು ಸಾಧ್ಯವೆ? ಆದರೆ ಠಾಕೂರರು ನಿಮ್ಮನ್ನೆಲ್ಲಾ ಚೆನ್ನಾಗಿಟ್ಟರಲಿ. ಇದುವೇ ನನ್ನ ಆಶೀರ್ವಾದ. ಇದನ್ನ ಎಲ್ಲರಿಗೂ ಕೊಡು. ನಾನು ಮತ್ತು ರಾಧು, ನಳಿನಿ, ಮೊದಲಾದವರೆಲ್ಲರೂ ಚೆನ್ನಾಗಿರುವೆವು. ನಿಮ್ಮೆಲ್ಲರ ಕ್ಷೇಮವನ್ನು ತಿಳಿಸಿ ಚಿಂತೆಯನ್ನು ದೂರ ಮಾಡಿ.

ಇತಿ ನಿಮ್ಮೆಲ್ಲರ ಶ್ರೀ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಪರಮ ಶುಭಪ್ರದಳಾದ*

*ಶ್ರೀಮತಿ ಸರಯೂ ಬಾಲಾ*

*೨೫ ನಂ ಕಾಂಕುಲಿಯಾ ರೋಡ್, ಬಾಲಿಗಂಜ್*

### ಪತ್ರ - ೧೨೬

ಶ್ರೀ ಶ್ರೀ ರಾಮಕೃಷ್ಣ

ಅಕ್ಟೋಬರ್೨, ೧೯೧೫

ಕಲ್ಕತ್ತಾ, ರವಿವಾರ

ಶುಭವಾಗಲಿ.

ತಾಯಿ, ನಿನ್ನ ಪತ್ರವು ಸಿಕ್ಕಿ ವಿಸ್ತಾರವಾಗಿ ಎಲ್ಲವನ್ನೂ ತಿಳಿದುಕೊಂಡೆ. ನಿನಗೆ ಕಾಯಿಲೆ ಇತ್ಯಾದಿ ವಿಷಯ ಕೇಳಿ ದುಃಖವಾಯಿತು. ಈ ಸಲ ಬೇಲೂರು ಮಠದಲ್ಲಿ ಪ್ರತಿಮೆಯನ್ನಿಟ್ಟು ದುರ್ಗಾಮಾತೆಯ ಪೂಜೆ ನಡೆಯುವುದು. ನನಗೆ ನಾಳೆ ಸೋಮವಾರ ಸಾಯಂಕಾಲ ಮಠಕ್ಕೆ ಹೋಗುವ ಇಚ್ಛೆ ಇದೆ. ಪೂಜೆಯ ದಿನಗಳಲ್ಲಿ ಅಲ್ಲಿಯೇ ತಂಗುವೆ. ಏಕಾದಶಿ ದಿನದಂದು ಮರಳಿ ಬರಬಹುದೆಂದು ಅನ್ನಿಸುತ್ತದೆ. ಸೌಕರ್ಯವಿದ್ದರೆ ಒಂದು ದಿನ ನೀನು ಅಲ್ಲಿಗೆ ಹೋಗು. ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು. ಹೇಮಪ್ರಭಾಳ ಪತ್ರವೂ ಸಿಕ್ಕಿದೆ. ಮಠದಲ್ಲಿ ಆ ದಿನಗಳಲ್ಲಿ ತುಂಬಾ ಜನಸಂದಣಿ ಇರುವುದು. ಶಾರೀರಿಕವಾಗಿ ಅಸೌಖ್ಯವಿದ್ದರೆ ಹೋಗಬೇಡ. ನಾನು ಶಾರೀರಿಕವಾಗಿ ಒಂದು ರೀತಿ ಇದ್ದೇನೆ. ಹುಚ್ಚಿ, ರಾಧು ಮೊದಲಾದ ಎಲ್ಲರೂ ಚೆನ್ನಾಗಿದ್ದಾರೆ.

ಇತಿ

ಆಶೀರ್ವಾದ ನೀಡುತ್ತಿರುವ

ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು***

*ನಿರುಪಮಾ ದೇವಿ*

*(ಮಠ: ಬೇಲೂರು ಮಠ; ಹುಚ್ಚಿ: ರಾಧುವಿನ ತಾಯಿ ಸುರಬಾಲೆ)*

**ಪತ್ರ - ೧೨೭**

ಶ್ರೀ ಶ್ರೀ ಹರಿ

೯.೧೦.೧೯೧೫

ಪರಮ ಆಶೀರ್ವಾದ,

ತಾಯಿ, ನಿನ್ನ ಪತ್ರವು ಸಿಕ್ಕಿದೆ. ನಿಮಗೆಲ್ಲರಿಗೂ ನನ್ನ ಆಶೀರ್ವಾದ. ಇಲ್ಲಿ ಕ್ಷೇಮ. ನಿಮ್ಮೆಲ್ಲರ ಕ್ಷೇಮ ವನ್ನು ತಿಳಿಸು.

ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಶ್ರೀಮತಿ ಸರಯೂಬಾಲಾ ದೇವಿ*
*25, Kankulia Road*
*P.O. Ballyganj*
*Calcutta*

**ಪತ್ರ - ೧೨೮**

೧೯.೧೦.೧೯೧೫

ಕಾರ್ತಿಕ ೨, ಜಯರಾಂಬಾಟಿ

ಶುಭವಾಗಲಿ,

ನೀನು ಕಳುಹಿಸಿರುವ ೨ ರೂಪಾಯಿ ಸಿಕ್ಕಿತು. ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು.

ಇತಿ ನಿಮಗೆಲ್ಲಾ ಆಶೀರ್ವಾದ ನೀಡುತ್ತಿರುವ

ಶ್ರೀ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Sm Surendranath Gupta*
*Akbarpur Karimganj*
*Assam (Sylhet)*

**ಪತ್ರ - ೧೨೯**

೨೫ .೧೦.೧೯೧೫

ಜಯರಾಂಬಾಟಿ, ಕಾರ್ತಿಕ ೭

ಶುಭವಾಗಲಿ,

ನಿನ್ನ ಪತ್ರವು ಸಿಕ್ಕಿದೆ. ನೀನು ನನ್ನ ವಿಜಯದಶಮಿಯ ಆಶೀರ್ವಾದವನ್ನು ಸ್ವೀಕರಿಸು. ಇಲ್ಲಿ ಎಲ್ಲವೂ ಕ್ಷೇಮ.

ಇತಿ ಆಶೀರ್ವಾದ ನೀಡುತ್ತಿರುವ

ಶ್ರೀ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಆಶೀರ್ವಾದ ಪಡೆಯುವ*
*ಶ್ರೀ ಸುರೇಂದ್ರ ನಾಥ್ ಗುಪ್ತ*
*P.O. Karimganj Sylhet*
*Karimganj Govt. Agrifarm*

**ಪತ್ರ - ೧೩೦**

ಶ್ರೀ ಶ್ರೀ ದುರ್ಗಾಮಾತೆ

೭.೧೧.೧೯೧೫

ಜಯರಾಂಬಾಟಿ

ಚಿರಂಜೀವಿಗೆ,

ತಾಯಿ ಸರಯೂ, ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ನಿಮಗೆಲ್ಲರಿಗೂ ನನ್ನ ಆಶೀರ್ವಾದ. ನಿಮ್ಮೆಲ್ಲರ ಕ್ಷೇಮದ ಬಗ್ಗೆ ಸರ್ವದಾ ತಿಳಿಸುತ್ತಿರು. ನಾವೆಲ್ಲಾ ಇಲ್ಲಿ ಸ್ವಲ್ಪಮಟ್ಟಿಗೆ ಚೆನ್ನಾಗಿದ್ದೇವೆ. ನಿನಗೆ ನನ್ನ ಆಶೀರ್ವಾದ ಮತ್ತು ಎಲ್ಲರಿಗೂ ತಿಳಿಸು.

ಇತಿ ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಶ್ರೀಮತಿ ಸರಯೂ ಬಾಲಾ (ದತ್ತ )*
*ಪೋ: ಹಸಾಡಾ ಗ್ರಾಮ ಹಾಗೂ*
*ಶ್ರೀಯುತ ಬಾಬು ಮಥುರನಾಥ್ ರಾಯ್ ಚೌಧುರಿ ಶರ್ಮ*
*ಜಿಲ್ಲೆ – ಢಾಕಾ*

**ಪತ್ರ - ೧೩೧**

ಶ್ರೀ ಶ್ರೀ ಹರಿ

೧೯.೨.೧೯೧೬

ಫಾಲ್ಗುಣ ೭, ಶನಿವಾರ

ಪರಮ ಆಶೀರ್ವಾದ,

ಮತ್ತೆ ಸೊಸೆಯಮ್ಮ, ನಿನ್ನ ಪತ್ರವು ಸಿಕ್ಕಿದೆ. ಖೂಕುವಿನ (ಮಗಳ) ಜ್ವರ ಇನ್ನೂ ವಾಸಿಯಾಗಿಲ್ಲವೆಂದು ಕೇಳಿ ದುಃಖವಾಯಿತು. ಠಾಕೂರರು ಅಂತೂ ಮಂಗಳವನ್ನುಂಟುಮಾಡಲಿ. ಇನ್ನು ಏನು ಬರೆಯಲಿ. ಖೂಕುವಿಗೆ ನನ್ನ ಆಶೀರ್ವಾದವನ್ನು ತಿಳಿಸು. ಹಾಗೂ ನಿನ್ನ ಅಕ್ಕನಿಗೂ ನನ್ನ ಆಶೀರ್ವಾದವನ್ನು ತಿಳಿಸು. ಶೋಕಹರಣನಿಗೆ ನನ್ನ ಆಶೀರ್ವಾದವನ್ನು ತಿಳಿಸು. ಮತ್ತು ನಿನಗೂ ನನ್ನ ಆಶೀರ್ವಾದ. ಇಲ್ಲಿ ಕ್ಷೇಮ. ನಾನು ಹಾಗೆಯೇ ಇದ್ದೇನೆ.

ಇತಿ ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಪರಮ ಶುಭಪ್ರದಳಾದ*
*ಶ್ರೀಮತಿ ಸುಮತಿ ಬಾಲಾ ದಾಸಿ*
*೧೮ ನಂ ಗಡಿಯಾ ಹಾಟ್ ರೋಡ್*
*ಬಾಲಿಗಂಜ್ , ಕಲ್ಕತ್ತಾ*
*ಶ್ರೀಯುತ ಬಾಬು ಶೋಕಹರಣನ ಮನೆ*